# ಜನ ಸೇವಕ

**ಅಭಿವೃದ್ಧಿಯ ಪರ್ವ**

ಸಂಪುಟ 01, ಸಂಚಿಕೆ 01, ಜನವರಿ 2022, ಯಲ್ಲಾಪುರ

**ಯಲ್ಲಾಪುರ ವಿಧಾನಸಭಾ ಕ್ಷೇತ್ರದಾದ್ಯಂತ ಅಭಿವೃದ್ಧಿಯ ಪರ್ವ**

**ಜಿಲ್ಲೆಯ ಹಿರಿಮೆ ಹೆಚ್ಚಿಸಿದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ತುಳಸಿ ಗೌಡ**

**ಬಡತನದ ನಡುವೆಯು ಸಾಧನೆಯ ಶಿಖರವೇರಿದ ಕಮಲಾ ಸಿದ್ಧಿ**




**ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಮಾಹಿತಿಯನ್ನು ಹೊಂದಿರುವ ಡಿಜಿಟಲ್ ಸಂಚಿಕೆ**





ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನಲ್ಲಿ
ಕಾರ್ಮಿಕ ಕಲ್ಯಾಣ ಭವನ ನಿರ್ಮಾಣ
ಕಾಮಗಾರಿಗೆ ಭೂಮಿ ಪೂಜೆಯನ್ನು ನೆರವೇರಿಸಿದರು



ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ
ಬೊಮ್ಮಾಯಿ ಅವರೊಂದಿಗೆ ಹಾನಗಲ್ ವಿಧಾನಸಭಾ
ಕ್ಷೇತ್ರದ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡರು.



ಜನಸ್ವರಾಜ್ ಸಮಾವೇಶ ಕಾರ್ಯಕ್ರಮಕ್ಕಾಗಿ ಯಲ್ಲಾಪುರ ಪಟ್ಟಣಕ್ಕೆ ಆಗಮಿಸಿದ
ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪ ನವರನ್ನು
ಅತ್ಯಂತ ಆತ್ಮೀಯತೆಯಿಂದ ಸನ್ಮಾನಿಸಿ ಸ್ವಾಗತಿಸಿದರು.





ವಿಜಯನಗರ ಜಿಲ್ಲೆಯ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡರು.

"ಸಾಧ್ಯವೇ ಇಲ್ಲ ಎಂದುಕೊಂಡರೆ ಏನನ್ನೂ
ಸಾಧಿಸಲಾಗದು. ಪ್ರಯತ್ನಿಸುವುದರಿಂದ ನಷ್ಟವೇನಿದೆ?
ಗೆದ್ದರೆ ಸಂತೋಷ, ಸೋತರೆ ಅನುಭವ"

- **ಸ್ವಾಮಿ ವಿವೇಕಾನಂದ**



ಸಂಪುಟ 01, ಸಂಚಿಕೆ 01, ಜನವರಿ 2022, ಯಲ್ಲಾಪುರ

# ಪುಟ ಬಿಂಬ


» **ನೆನಪಿನಂಗಳ** 4

» **ಅಭಿವೃದ್ಧಿಯ ಪರ್ವ**

- ಹೈಟೆಕ್ ಬಸ್ ನಿಲ್ದಾಣ 6
- ಪಟ್ಟಣ ಪಂಚಾಯತ ಕಟ್ಟಡ ಹಾಗೂ ಬೇಡ್ತಿ ಸೇತುವೆ 7
- ತಾಲೂಕಾ ಆಡಳಿತ ಸೌಧ 8
- ಸುಸಜ್ಜಿತ ಪ್ರವಾಸಿ ಮಂದಿರ 9

» **ನಮ್ಮೂರ ಸಾಧಕರು**

- ಗ್ರಾಮೀಣ ಪ್ರತಿಭೆ ಕಮಲಾಸಿದ್ದಿ 10
- ಕರಾಟೆ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮುಂಡಗೋಡದ ಯುವಕ 11
- ಮಿಂಚಿನ ಓಟದ ಪ್ರತಿಭೆ ನಯನಾ ಕೊಕರೆ 12
- ವೃಕ್ಷ ಮಾತೆ ತುಳಸಿ ಗೌಡ 13

» **ಇ-ಶ್ರಮ (e-Shram )** 15

» **ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗೆ**

» **ರಾಜ್ಯಾದಾದ್ಯಂತ ಉಚಿತ ಬಸ್ ಪಾಸ್** 16

» **ನಮ್ಮೂರ ಪ್ರವಾಸಿತಾಣ**

- ಸಾತೊಡಿ ಜಲಪಾತ 19




# ನೆನಪಿನಂಗಳ

ಕಳೆದವರ್ಷ ಯಲ್ಲಾಪುರ ತಾಲೂಕಿನ ಇಡಗುಂದಿ ಭಾಗದ ಕಾರ್ಯಕರ್ತರು ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮವನ್ನು ಮುಗಿಸಿಕೊಂಡು ಬೆಂಗಳೂರಿಗೆ ಹೋಗುವಾಗ ಈಪೋಟೋ ನನ್ನ ಕಣ್ಣಿಗೆ ಬಿತ್ತು ಭಾರತೀಯ ಜನತಾಪಕ್ಷದ ಜಿಲ್ಲಾಧ್ಯಕ್ಷನಾಗಿದ್ದ ಸಮಯದಲ್ಲಿ ಪಕ್ಷ ಸಂಘಟನಾ ಕಾರ್ಯಕ್ರಮದಲ್ಲಿ ತೆಗೆದ ಪೋಟೋ ಇದು.

ಅಂದು ಭಾರತೀಯ ಜನತಾ ಪಾರ್ಟಿಯ ಜಿಲ್ಲಾಧ್ಯಕ್ಷನಾದ ಸಮಯದಲ್ಲಿ ಪಕ್ಷ ಕಟ್ಟಿದ ಹಾಗೂ ಓರ್ವ ಸಾಮಾನ್ಯ ಕಾರ್ಯಕರ್ತನಾಗಿ ಪಕ್ಷಕ್ಕೆ ಸೇವೆ ಸಲ್ಲಿಸಿದ್ದು ನೆನಪಾಯಿತ್ತು. ಮಾಜಿ ಕೇಂದ್ರ ಸಚಿವರಾದ ದಿ.ಅನಂತಕುಮಾರ ಅವರನ್ನು ಜಿಲ್ಲಾ ಪಂಚಾಯತ ಚುನಾವಣಾ ಸಂದರ್ಭದಲ್ಲಿ

ನನ್ನ ಹೀರೊ ಹೋಂಡಾ ಬೈಕ್ ನಲ್ಲಿ ಕುಳಿಸಿಕೊಂಡು ಹಳ್ಳಿ ಹಳ್ಳಿಗಳಿಗೆ ತೆರಳಿ ಪ್ರಚಾರ ಮಾಡಿರುವ ನೆನಪು ಇನ್ನೂ ಸಹ ಕಣ್ಣಮುಂದಿದೆ.

ಈ ಪೋಟೋದಲ್ಲಿ ಯಲ್ಲಾಪುರ ಭಾರತೀಯ ಜನತಾ ಪಕ್ಷದ ತಾಲೂಕಾಧ್ಯಕ್ಷರಾಗಿದ್ದ ದಿ.ರಾಮಣ್ಣ ಮೆಣಸುಮನೆ ಉಪಾಧ್ಯಕ್ಷರಾದ ದಿ.ಶೇಶಪ್ಪ ಪಾಲೇಕರ್ ಹಾಗೂ ವಿಧಾನ ಸಭಾಧ್ಯಕ್ಷರಾದ ಶ್ರೀವಿಶ್ವೇಶ್ವರ ಹೆಗಡೆ ಕಾಗೇರಿ, ಪಕ್ಷದ ಹಿರಿಯರಾದ ದಿ. ಸದಾನಂದ ಬೀಡಿಕರ್, ವಿದ್ಯಾಧರ ಪ್ರಭು, ರಾಮು ನಾಯ್ಕ ನನ್ನ ಜೊತೆಯಲ್ಲಿ ಇದ್ದಾರೆ.

ಈ "ನೆನಪಿನಂಗಳದಲ್ಲಿ ಬಿಜೆಪಿ" ಎಂಬ ಶೀರ್ಷಿಕೆಯಡಿಯಲ್ಲಿ ಬಿತ್ತರವಾದ ಈ ಪೋಟೋ ನನ್ನ ಹಳೆಯ ನೆನಪುಗಳು ಮರುಕಳಿಸುವಂತೆ ಮಾಡಿತ್ತು.

ಶಿವರಾಮ ಹೆಬ್ಬಾರ್



# ಅಭಿವೃದ್ಧಿಯ ಮಹಾ ಪರ್ವ



ಅಭಿವೃದ್ಧಿಯ ಮಹಾಪರ್ವ ಪ್ರಾರಂಭವೆಂದರೆ ಅದು ಯಲ್ಲಾಪುರ ವಿಧಾನಸಭಾ ಕ್ಷೇತ್ರದಿಂದ ಸತತ ಮೂರು ಬಾರಿ ಆಯ್ಕೆಯಾಗುತ್ತಾ ಬಂದ ಅರಬೈಲ್ ಶಿವರಾಮ ಹೆಬ್ಬಾರ್ ಶಾಸಕರಾದ ನಂತರ ಕ್ಷೇತ್ರದ ಅಭಿವೃದ್ಧಿಗಾಗಿ ತಮ್ಮ ರಾಜಕೀಯ ಭವಿಷ್ಯವನ್ನು ಪಣಕ್ಕಿಟ್ಟು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿ ರಾಜ್ಯದ ಕಾರ್ಮಿಕ ಸಚಿವರಾಗಿ ರಾಜ್ಯವೇ ಮೆಚ್ಚುವಂತಹ ಕಾರ್ಯ ಮಾಡಿ ತೋರಿಸಿದರು. ವಿಶೇಷವಾಗಿ ಉತ್ತರಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾದ ನಂತರ ಜಿಲ್ಲೆಯ ಆರೋಗ್ಯ ಕ್ಷೇತ್ರದಲ್ಲಿ ಅಮೂಲ್ಯ ಬದಲಾವಣೆ ತಂದರು.

ತಾಲೂಕಿನ ಸರ್ಕಾರಿ ಆಸ್ಪತ್ರೆ ಹಿಂದೆಂದೂ ಕಂಡಿರದಂತಹ ಅಭಿವೃದ್ಧಿ ಕಂಡಿದ್ದು ಶಿವರಾಮ ಹೆಬ್ಬಾರರು ಸಚಿವರಾದ ನಂತರ. ಬಿಡುಗಡೆಯಾದ ಅನುದಾನಕ್ಕೆ ತೃಪ್ತಿ ಪಟ್ಟುಕೊಳ್ಳದೇ ಅವಿರತ ಶ್ರಮದಿಂದ ಹೆಚ್ಚಿನ ಅನುದಾನ ತರುವಲ್ಲಿ ಯಶಸ್ವಿಯಾಗಿದ್ದು. ಜಿಲ್ಲೆಯ ಆಸ್ಪತ್ರೆಗಳೆಲ್ಲಾ ಸಕಲ ಸೌಕರ್ಯಗಳುಳ್ಳ ದೇವಾಲಯಗಳಂತಾಗಿವೆ. ಅದರಲ್ಲೂ ಯಲ್ಲಾಪುರದ ಆಸ್ಪತ್ರೆ ಸಕಲ ವ್ಯವಸ್ಥೆಗಳಿಂದ ಸಜ್ಜಾಗಿದೆ. ಕೇವಲ ಸರ್ಕಾರವನ್ನೇ ನಂಬಿಕೊಳ್ಳದೇ ತನ್ನ ಸ್ನೇಹ ಬಳಗ, ಕುಟುಂಬ, ಹಿತೈಷಿಗಳ ಮನವೊಲಿಸಿ ಡಯಾಲಿಸಿಸ್ ಸೆಂಟರ್, ಅತ್ಯಾಧುನಿಕ ಸೋಲಾರ್‌ಆಧಾರಿತ ಹೆರಿಗೆ ಕೊಠಡಿ, ಆಕ್ಸಿಜನ್ ಪ್ಲಾಂಟ್, ವ್ಯಾಕ್ಸಿನೇಷನ್ ಸೆಂಟರ್, ಸುಸಜ್ಜಿತ ಅಂಬುಲೆನ್ಸ್‌ಗಳು, ಕೊರೊನಾ ಸಂದರ್ಭದಲ್ಲಿ ವೈದ್ಯರ ಕೊರತೆಯಾಗದಂತೆ ವೈದ್ಯಕೀಯ ಶಿಕ್ಷಣ ಮುಗಿಸಿದ ವೈದ್ಯರ ಸೇವೆ ಜಿಲ್ಲೆಯ ಆಸ್ಪತ್ರೆಗಳಿಗೆ ದೊರೆಯುವಂತೆ ಮಾಡಿದ್ದಾರೆ. ಕನಿಷ್ಠ ತಿಂಗಳಿಗೊಮ್ಮೆಯಾದರೂ ಆಸ್ಪತ್ರೆಗೆ ಭೇಟಿ ನೀಡಿ ಬೇಕು ಬೇಡಗಳನ್ನು ಪರಿಶೀಲಿಸಿ ಒಂದು ಸ್ವಚ್ಛ, ಸುಂದರ ಆಸ್ಪತ್ರೆಯ ಪರಿಕಲ್ಪನೆ ಸಾರ್ವಜನಿಕ ವಲಯದಲ್ಲಿ ಮೂಡುವಂತೆ ಮಾಡಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ ತೆರೆದಿರುವುದು ಡಯಾಲಿಸಿಸ್‌ಗೆ ಒಳಗಾಗುವ ನಾಗರೀಕರಿಗೆ ಭಾಗ್ಯದ ಬಾಗಿಲು ತೆರೆದಂತಾಗಿದೆ.

# ಬಸ್‌ನಿಲ್ದಾಣ



ಒಂದು ಊರಿನ ಪ್ರಗತಿ, ಅಭಿವೃದ್ಧಿಯ ದರ್ಶನವಾಗುವುದು ಊರಿನ ಬಸ್‌ನಿಲ್ದಾಣದ ವ್ಯವಸ್ಥೆಯ ಮೇಲೆ ಅವಲಂಬಿತವಾಗಿರುತ್ತದೆ.

ಯಲ್ಲಾಪುರದಲ್ಲಿ ಭವ್ಯವಾಗಿ ತಲೆ ಎತ್ತಿ ನಿಂತಿರುವ ಸುಂದರವಾದ ಬಸ್ ನಿಲ್ದಾಣ ಸಚಿವ ಶಿವರಾಮ ಹೆಬ್ಬಾರ್ ಅವರ ಪರಿಶ್ರಮದ ಪ್ರತೀಕ. ಒಬ್ಬ ಜನನಾಯಕ ಕೇವಲ ವೇದಿಕೆಗೆ, ಪತ್ರಿಕೆಗೆ ಅಥವಾ ಅಧಿಕಾರಕ್ಕಾಗಿ ನಾಯಕನೆಂದು ತೋರಿಸಿಕೊಂಡರೆ ಸಾಲದು ಬದಲಾಗಿ ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸಿ ಅವಶ್ಯ ವ್ಯವಸ್ಥೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ ಮಾತ್ರ ನಿಜವಾದ ನಾಯಕನಾಗುತ್ತಾನೆ.ಅದಕ್ಕೆ ಜ್ವಲಂತ ನಿದರ್ಶನವೆಂದರೆ ಅರಬೈಲ್ ಶಿವರಾಮ ಹೆಬ್ಬಾರ್

ಪಟ್ಟಣದಲ್ಲಿ ಭವ್ಯವಾಗಿ ತಲೆ ಎತ್ತಿ ನಿಂತಿರುವ ಬಸ್‌ನಿಲ್ದಾಣ ಯಲ್ಲಾಪುರದ ಗೌರವದ ಪ್ರತೀಕವಾಗಿದೆ. ಬಹುಶಃ ಜಿಲ್ಲೆಯಲ್ಲಿ ಇಷ್ಟು ವಿಶಾಲವಾದ ಸುಂದರ ಸುಸಜ್ಜಿತ ಬಸ್‌ನಿಲ್ದಾಣ ಮತ್ತೊಂದಿಲ್ಲ. ನಿಲ್ದಾಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ತೆರೆದು ಮಾದರಿ ನಿಲ್ದಾಣ ಮಾಡಿದ್ದಾರೆ. ಕೆಲವು ಕಟ್ಟಡಗಳು ಬಹುಕಾಲದವರೆಗೆ ಜನಮಾನಸದಲ್ಲಿ ಅಚ್ಚಳಿಯದೆ ನಿಂತು ಬಿಡುತ್ತದೆ. ಅಂತಹ ಭವ್ಯವಾದ ಬಸ್ ನಿಲ್ದಾಣ ನೂರಾರು ವರ್ಷ ಸಚಿವ ಹೆಬ್ಬಾರ್ ಅವರ ಅಭಿವೃದ್ಧಿ ಕಾರ್ಯಗಳ ಕೈಗನ್ನಡಿಯಾಗಿ ಜನತೆಗೆ ಕಾಣಲಿದೆ.






# ಪಟ್ಟಣ ಪಂಚಾಯತ ಕಟ್ಟಡ

ಯಲ್ಲಾಪುರ ಪಟ್ಟಣ ಪಂಚಾಯತ ಕಟ್ಟಡ ಬಹುಕಾಲದ ಬೇಡಿಕೆಯಾಗಿತ್ತು. ಹಿಂದಿನ ಶಾಸಕರೆಲ್ಲಾ ನೂತನ ಕಟ್ಟಡ ನಿರ್ಮಿಸುವ ಆಶ್ವಾಸನೆ ಕೊಡುತ್ತಿದ್ದರೆ ಹೊರತು ಕಾರ್ಯರೂಪಕ್ಕೆ ತರುವಲ್ಲಿ ವಿಫಲರಾಗಿದ್ದರು. ಆದರೆ ಸಚಿವ ಶಿವರಾಮ ಹೆಬ್ಬಾರ್ ಶಾಸಕರಾಗಿದ್ದ ಅವಧಿಯಲ್ಲಿ ಪಟ್ಟಣ ಪಂಚಾಯತಗೆ ನೂತನ ಕಟ್ಟಡ ನಿರ್ಮಿಸುತ್ತೇನೆಂದು ಪಣತೆ-ೂಟ್ಟು ಬದಲಾದ ರಾಜಕೀಯ ಸನ್ನಿವೇಶದಲ್ಲಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಅಭಿವೃದ್ಧಿ ಒಂದೇ ನನ್ನ ಗುರಿ ಎಂಬ ದೃಷ್ಟಿಯಿಂದ ಮತ್ತೆ ಜನತಾ ಜನಾರ್ಧನನ ಅಪ್ಪಣೆಗಾಗಿ ಚುನಾವಣೆಯಲ್ಲಿ ನಿಂತು ಗೆದ್ದು ಸಚಿವರಾದರು. ತಾನಂದುಕೊಂಡ ಯಾವುದೇ ಕಾಮಗಾರಿಯನ್ನು ಅರ್ಧಕ್ಕೆ ಬಿಡದೇ ಹಿಡಿದ ಛಲದಿಂದ ಹೆಚ್ಚಿನ ಅನುದಾನ ತಂದು ಸರ್ವ ಸುಸಜ್ಜಿತ ಪಟ್ಟಣ ಪಂಚಾಯತ ಕಟ್ಟಡ ಸಿದ್ಧವಾಗಿ ಕೆಲಸ ಕಾರ್ಯಗಳು ನಡೆಯುತ್ತಿವೆ.



ಕಟ್ಟಡ ಅತ್ಯಂತ ವಿಶಾಲವಾಗಿದ್ದು ದೊಡ್ಡ ಸಭಾಂಗಣ , ಅಧ್ಯಕ್ಷ, ಉಪಾಧ್ಯಕ್ಷರ ಚೇಂಬರ್, ಅಧಿಕಾರಿವರ್ಗದವರ ಕೆಲಸ ಕಾರ್ಯಗಳಿಗಾಗಿ ವಿಶಾಲವಾದ ವ್ಯವಸ್ಥಿತ ಕಟ್ಟಡ ರೂಪುಗೊಂಡಿದೆ. ಇದಲ್ಲದೆ ಬದ್ಧತೆಯ ಕಾರ್ಯವೆಂದರೆ?

# ಬೇಡ್ತಿ ಸೇತುವೆ



ಯಲ್ಲಾಪುರ ಹಾಗೂ ಶಿರಸಿ ತಾಲೂಕಿನ ಸಂಪರ್ಕ ಕೊಂಡಿಯಾಗಿರುವ ಬೇಡ್ತಿ ಸೇತುವೆಯನ್ನು ನೂತನವಾಗಿ ನಿರ್ಮಾಣ ಮಾಡುವುದು ಈ ಭಾಗದ ಸಾರ್ವಜನಿಕರ ದಶಕಗಳ ಕನಸಾಗಿತ್ತು, ಮಾನ್ಯ ಸಚಿವರಾದ ಶ್ರೀ ಶಿವರಾಮ ಹೆಬ್ಬಾರ್ ಅವರು ಅತ್ಯಂತ ಚಿಕ್ಕದಾಗಿರುವ ಸೇತುವೆಯಿಂದ ಸಾರ್ವಜನಿಕರು ಅನುಭವಿಸುತ್ತಿರುವ ಕಷ್ಟವನ್ನು ಮನಗಂಡು ಸರ್ಕಾರದ ಮಟ್ಟದಲ್ಲಿ ಅವಿರತ ಪ್ರಯತ್ನದ ಫಲವಾಗಿ ಕೇಂದ್ರ ಹಾಗೂ ರಾಜ್ಯ ಸರಕಾರದ ಸಹಭಾಗಿತ್ವದಲ್ಲಿ ಸುಮಾರು 24 ಕೋಟಿ ರೂಪಾಯಿ ವೆಚ್ಚದಲ್ಲಿ ನೂತನ ಬೇಡ್ತಿ ಸೇತುವೆ ನಿರ್ಮಾಣವಾಗಿ ಲೋಕಾರ್ಪಣೆಗೊಂಡಿದೆ.

ದಟ್ಟ ಕಾನನದ ನಡುವಿನಲ್ಲಿರುವ ಈ ನೂತನ ಸೇತುವೆಯು 200 ಮೀಟರ್ ಉದ್ದವನ್ನು ಹೊಂದಿದ್ದು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ನಿರ್ಮಾಣ ಮಾಡಲಾಗಿದೆ. ಅಂದಿನ ಉಪಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರಾದ ಶ್ರೀ ಲಕ್ಷ್ಮಣ ಸವದಿ ಅವರು ನೂತನ ಸೇತುವೆಯನ್ನು ಲೋಕಾರ್ಪಣೆಗೊಳಿಸಿದರು. ಶಿವರಾಮ ಹೆಬ್ಬಾರ್ ಅವರು ಬೇಡ್ತಿ ಸೇತುವೆಯ ನಿರ್ಮಾಣಕ್ಕಾಗಿ ಸರಕಾರದ ಮಟ್ಟದಲ್ಲಿ ವಿಶೇಷ ಪ್ರಯತ್ನವನ್ನು ನಡೆಸಿ ಹೆಚ್ಚಿನ ಅನುದಾನ ಮಂಜೂರಿ ಮಾಡಿಸುವುದರ ಮೂಲಕವಾಗಿ ಈ ಭಾಗದ ಜನತೆಯ ಹಲವಾರು ದಶಕಗಳ ಕನಸು ನನಸಾಗಿದೆ.

# ತಾಲೂಕಾ ಆಡಳಿತ ಸೌಧ



ತಾಲೂಕಿನ ಪ್ರಮುಖ ಜೀವನಾಡಿ, ಶಕ್ತಿಸೌಧ ಅದುವೆ ಮಿನಿ ವಿಧಾನಸೌಧ- ತಹಸೀಲ್ದಾರರ ಕಚೇರಿ.ಪಟ್ಟಣದಲ್ಲಿ ಹಾದು ಹೋಗಿರುವ ಬಳ್ಳಾರಿ-ಕಾರವಾರ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಗಗನದೆತ್ತರಕ್ಕೆ ಸೊಬಗಿನಿಂದ ನಿಂತಿರುವ ಬೃಹದಾಕಾರದ ಕಟ್ಟಡವೇ ಮಿನಿ ವಿಧಾನಸೌಧ. ಪ್ರಸ್ತುತವಿರುವ ತಹಸೀಲ್ದಾರರ ಕಛೇರಿಯ ಹಳೆಯ ಕಟ್ಟಡವಾಗಿದ್ದು ಎಲ್ಲೆಂದರಲ್ಲಿ ಸೋರುತ್ತಿತ್ತು.

ಊರಿನ ಗೌರವದ ಪ್ರತೀಕವಾಗಿರುವ ತಹಸೀಲ್ದಾರರ ಕಛೇರಿಯ ಅವ್ಯವಸ್ಥೆಯನ್ನು ಕಂಡು ಸಚಿವ ಶಿವರಾಮ ಹೆಬ್ಬಾರ್‌ಅವರು ಸುಸಜ್ಜಿತ ಬೃಹತ್ ಕಟ್ಟಡ ಕಟ್ಟಿಸಿಯೇ ಸಿದ್ದ ಎಂದು ಹಿಡಿದ ಪಟ್ಟನ್ನು ಬಿಡದೇ ಸಂಬಂಧಪಟ್ಟ ಇಲಾಖೆಗಳ ಸಚಿವರನ್ನು ಭೇಟಿಯಾಗಿ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿ ನೂತನ ಮಿನಿ ವಿಧಾನಸೌಧ ಕಟ್ಟಡ ಮಂಜೂರು ಮಾಡಿಸಿದ್ದು ಕಟ್ಟಡದ ಕೆಲಸ ಪ್ರಾರಂಭಗೊಂಡು ಮುಕ್ತಾಯದ ಹಂತ ತಲುಪುವಷ್ಟರಲ್ಲಿ ಅಂದಾಜು ಮೌಲ್ಯಕ್ಕಿಂತ ಹೆಚ್ಚಿನ ಖರ್ಚು ತಗುಲಿದರೂ ಕೆಲಸ ಸ್ಥಗಿತಗೊಳಿಸದೇ ಸಚಿವರ ಪ್ರಯತ್ನದ ಫಲವಾಗಿ ಹೆಚ್ಚಿನ ಅನುದಾನ ತಂದು ಭವಿಷ್ಯದ ದೃಷ್ಟಿಯಿಂದ ನಿರ್ಮಿಸಿದ ಸುಂದರ ಕಟ್ಟಡ ಮುಕ್ತಾಯ ಹಂತ ತಲುಪಿ ಲೋಕಾರ್ಪಣೆಗೆ ಸಿದ್ಧಗೊಂಡಿದೆ.

ಸಚಿವ ಹೆಬ್ಬಾರ್ ಅವರ ದೂರದೃಷ್ಟಿಯ ಸುಂದರ, ಸುಭದ್ರ , ಸರ್ವಾಂಗೀಣ ಅಭಿವೃದ್ಧಿಯ ಯಲ್ಲಾಪುರದ ಕಲ್ಪನೆ ಸಾಕಷ್ಟು ಸಾಕಾರಗೊಂಡಿದೆ. ಆದರೂ ತೀರದ ಅಭಿವೃದ್ಧಿಯ ಚಿಂತನೆ ಇನ್ನಷ್ಟು ಕಾರ್ಯಗಳಿಗೆ ಪ್ರೇರಣೆಯಾಗುತ್ತಿದೆ. ಜನರಿಂದ, ಜನರಿಗಾಗಿ ಜನರಿಗೋಸ್ಕರವೇ ಒಬ್ಬ ಸೇವಕನಾಗಿ ಗುರುತಿಸಿಕೊಂಡಿರುವ ಒಬ್ಬ ನಿಜವಾದ ಜನನಾಯಕ ಮಾನ್ಯ ಶ್ರೀ ಶಿವರಾಮ ಹೆಬ್ಬಾರ್ ಅವರು.



# ಸುಸಜ್ಜಿತ ಪ್ರವಾಸಿ ಮಂದಿರ




ಗುಡ್ಡ-ಬೆಟ್ಟಗಳ ನಡುವೆ ಹಚ್ಚ-ಹಸಿರಿನ ಕಾನನದ ಮಧ್ಯೆ ಮೈದುಂಬಿ ನಿಂತ ಜಲಾಶಯ, ಹಕ್ಕಿಗಳ ಚಿಲಿ-ಪಿಲಿ ಕಲರವ, ಬಹು ದೂರದಿಂದ ಬರುವ ಯಾತ್ರಿಕರಿಗೆ ವಿರಮಿಸಲು ಭವ್ಯವಾದ ಪ್ರವಾಸಿ ಮಂದಿರದ ಸೌಕರ್ಯ ಹೊಂದಿದ ಅಪರೂಪದ ಪ್ರವಾಸಿ ತಾಣವೊಂದು ಯಾತ್ರಿಕರನ್ನು ತನ್ನತ್ತ ಕೈಬೀಸಿ ಕರೆಯುತ್ತಿದೆ.

ಅದುವೇ ಉತ್ತರಕನ್ನಡ ಜಿಲ್ಲೆಯ ಮುಂಡಗೋಡ ಪಟ್ಟಣದ ಹುಬ್ಬಳ್ಳಿ ರಸ್ತೆಯಲ್ಲಿರುವ ಬಾಚಣಕಿ ಜಲಾಶಯ. ಜಲಾಶಯದ ಸುತ್ತ-ಮುತ್ತಲಿರುವ ದಟ್ಟವಾದ ಅರಣ್ಯದಿಂದ ಬೀಸುವ ತಂಪಾದ ಗಾಳಿ ಎಂಥಹ ಬಿರು ಬೇಸಿಗೆಯಲ್ಲಿಯೂ ಮೈಗೆ ಹಿತ ನೀಡುತ್ತದೆ. ಪ್ರಕೃತಿಯ ರಮಣೀಯ ನೋಟ ಕಣ್ಮನಗಳಿಗೆ ಮುದ ತರುತ್ತದೆ. ನಾನಾ ತರದ ಪಕ್ಷಿಗಳ ಇಂಚರ, ಕಿವಿಗಳಿಗೆ ಇಂಪು ನೀಡುತ್ತದೆ. ಜಲಾಶಯದ ಸೊಬಗು ಸವಿಯಲು ಪ್ರವಾಸಿಗರು ಆಗಾಗ ಇಲ್ಲಿಗೆ ಬಂದು ಖುಷಿ ಪಡುತ್ತಾರೆ. ಭಾನುವಾರ ಮತ್ತು ರಜಾ ದಿನಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುತ್ತದೆ. ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಹಾವೇರಿ ಹಾಗು ಇನ್ನಿತರ ಕಡೆಗಳಿಂದ ಪ್ರವಾಸಿಗರು ಬರುತ್ತಾರೆ.

ಸಕಲ ಸೌಕರ್ಯಗಳ ಪ್ರವಾಸಿ ಮಂದಿರ ಬಾಚಣಕಿ ಜಲಾಶಯ ನೋಡಲು ಬರುವ ಯಾತ್ರಿಕರಿಗೆ ವಿಶ್ರಾಂತಿ ಪಡೆಯಲು ಒಂದು ಉತ್ತಮವಾದ ಸುಸಜ್ಜಿತ ಪ್ರವಾಸಿ ಮಂದಿರದ ಕೊರತೆ ಹಲವು ದಿನಗಳಿಂದ ಕಾಡುತ್ತಿತ್ತು. ಈ ಹಿಂದೆ ಇದ್ದ ಉಸ್ತುವಾರಿ ಸಚಿವರಾಗಲೀ ಅಥವಾ ಜನಪ್ರತಿನಿಧಿಗಳಾಗಲಿ ಈ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಆದರೆ ಈಗ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಮ ಹೆಬ್ಬಾರ ಸಕಲ ಸೌಕರ್ಯಗಳಿಂದ ಕೂಡಿದ ಪ್ರವಾಸಿ ಮಂದಿರದ ಕಟ್ಟಡ ನಿರ್ಮಾಣ ಮಾಡಿಸಿ ಕೊಟ್ಟಿದ್ದಾರೆ. ಈ ಪ್ರವಾಸಿ ಮಂದಿರದಲ್ಲಿ ಅತಿ ನೂತನ ಆಸನಗಳ ವ್ಯವಸ್ಥೆ, ವೈಶಿಷ್ಟ್ಯಪೂರ್ಣವಾದ ಪೀಠೋಪಕರಣ, ಎದುರುಗಡೆ ಪ್ರತ್ಯೇಕ ವಾಹನ ನಿಲುಗಡೆ ವ್ಯವಸ್ಥೆ ಹಾಗೂ ಇನ್ನಿತರ ಅತ್ಯಾಧುನಿಕ ಸೌಕರ್ಯಗಳನ್ನು ಕಲ್ಪಿಸಿಕೊಡುವುದರ ಮೂಲಕ ಜಲಾಶಯಕ್ಕೆ ಹೊಸ ಕಳೆ ತಂದಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ ಅವರ ಪ್ರಯತ್ನದಿಂದ ಜಿಲ್ಲೆಯಲ್ಲಿಯೇ ಉತ್ತಮವಾದ ಮತ್ತು ಸುಸಜ್ಜಿತವಾದ ಪ್ರವಾಸಿ ಮಂದಿರದ ನಿರ್ಮಾಣದಿಂದ ಜಲಾಶಯ ವೀಕ್ಷಣೆಗೆ ಬಂದ ಪ್ರವಾಸಿಗರಿಗೆ ತುಂಬಾ ಅನುಕೂಲವಾಗಲಿದೆ ಮತ್ತು ಬರುವ ದಿನಗಳಲ್ಲಿ ಪ್ರವಾಸಿಗರಿರು ಸಂಖ್ಯೆ ಹೆಚ್ಚಾಗಲಿದೆ ಎಂದು ತಾಲೂಕಿನ ಜನರು ಸಂತಸ ವ್ಯಕ್ತಪಡಿಸಿದ್ದಾರೆ.



# ನಮ್ಮೂರ ಸಾಧಕರು

## ಕ್ರೀಡಾಲೋಕದಲ್ಲಿ ಅರಳಿದ ಗ್ರಾಮೀಣ ಪ್ರತಿಭೆ ಕಮಲಾ ಸಿದ್ದಿ.

ಬೆಳೆಯುತ್ತಿರುವ ಜಗತ್ತಿನ ಓಟದ ಮದ್ಯೆ ಕ್ರೀಡೆಗಳು ತನ್ನ ಹಳೆಯ ಛಾಪನ್ನು ಕಳೆದುಕೊಳ್ಳುತ್ತಿವೆ. ಹಿಂದೆ ಕಷ್ಟಕರ ಬದುಕಿನ ನಡುವೆಯೂ ಯಾವುದೇ ಸೌಲಭ್ಯಗಳೂ ಇಲ್ಲದೇ ಗ್ರಾಮೀಣ ಮಟ್ಟದ ಕ್ರೀಡಾಲೋಕದಲ್ಲಿ ಅರಳಿದ ಪ್ರತಿಭೆ ಕಮಲಾ ಬಾಬು ಸಿದ್ದಿ.

1980ರ ದಶಕದಲ್ಲಿ ಆಗಿನ ಕೇಂದ್ರ ಸರ್ಕಾರ ಬುಡಕಟ್ಟು ಜನಾಂದವರಲ್ಲಿ ಅಡಗಿರುವ ಕ್ರೀಡಾಸ್ಫೂರ್ತಿಯನ್ನು ಹೊರತಂದು ಜಗತ್ತಿಗೆ ಪರಿಚಯಿಸುವ ಅಭಿಯಾನದಲ್ಲಿ ಬೆಳಕು ಕಂಡ ಯಲ್ಲಾಪುರ ತಾಲೂಕಿನ ಮಂಚೀಕೆರೆ ಸಮಪದ ಚಿಕ್ಕೊತ್ತಿ ಗ್ರಾಮದ ಬಡಕುಟುಂಬದಲ್ಲಿ ಜನಿಸಿದ ಕ್ರೀಡಾ ಪ್ರತಿಭೆಯೇ ಕಮಲಾ ಸಿದ್ದಿ. ಮುಂದೆ ಅನೇಕ ರಾಷ್ಟ್ರೀಯ – ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಅನೇಕ ಪದಕಗಳನ್ನುಮುಡಿಗೇರಿಸಿಕೊಂಡು ತಾಲೂಕಿನ ಕೀರ್ತಿಯನ್ನು ಎತ್ತರಕ್ಕೆ ಕೊಂಡೊಯ್ದರು.

ಬಡತನದ ನಡುವೆಯೂ ತಂದೆ ಬಾಬು ಸಿದ್ದಿ ಹಾಗೂ ತಾಯಿ ಲಕ್ಷ್ಮಿ ಸಿದ್ದಿಯವರು ತಮ್ಮ ಒಬ್ಬಳೇ ಮಗಳಿಗೆ ಉತ್ತಮ ವಿದ್ಯಾಭ್ಯಾಸ ನೀಡಬೇಕೆಂಬ ಹಂಬಲ ಹೊತ್ತಿದ್ದರು. ಪ್ರಾರಂಭದಲ್ಲಿ ವಿದ್ಯೆ ಮೇಲೆ ಗಮನ ಹರಿಸಿದರೂ ಕ್ರಮೇಣ ಕ್ರೀಡೆಯ ಕಡೆಗೆ ಆಸಕ್ತಿ ಬೆಳೆಯಿತು. ಹೀಗಳೆಯುವ ಅನೇಕರ ನಡುವೆಯೂ ಛಲ ಬಿಡದ ಓಟಗಾರ್ತಿಯಾಗಿ ರೂಪುಗೊಂಡು ಸಾಧನೆ ಮಾಡಿದವರು ಕಮಲಾ ಸಿದ್ದಿ. ಓಟದಲ್ಲಿ ಪಿ.ಟಿ. ಉಷಾರನ್ನು ಪ್ರೇರಣೆ–ಯಾಗಿ ತೆಗೆದುಕೊಂಡ ಕಮಲಾ ಸಿದ್ದಿ ಆಗಿನ ಕ್ರೀಡಾಪಟುಗಳ ಜೊತೆಯಲ್ಲಿ ಅಂಕಣಕ್ಕಿಳಿದರೆ ಬೇರೆ ಕ್ರೀಡಾಪಟುಗಳು ಹೆದರುತ್ತಿದ್ದರು. ಅಷ್ಟೊಂದು ಓಟದ ನಿಪುಣತೆಯನ್ನು ಮೈಗೂಡಿಸಿಕೊಂಡಿದ್ದವರಾಗಿದ್ದರು.

ವಿದ್ಯಾಭ್ಯಾಸದ ದಿನಗಳಲ್ಲಿಯೇ ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ಕಮಲಾ ಸಿದ್ದಿ ನಂತರ ರಾಷ್ಟ್ರೀಯ – ಅತರಾಷ್ಟ್ರೀಯ ಕ್ರೀಡೆಗಳಲ್ಲಿಯೂ ಪದಕಗಳ ಭೇಟೆಯಾಡುವುದರಲ್ಲಿ ನಿಷ್ಣಾತರಾಗಿದ್ದಾರೆ. ಈಕೆಗೆ ತರಬೇತಿ ನೀಡಿದ ಪುತ್ತೂರು ಮೂಲದ ಪುರುಷೋತ್ತಮ ರಾಯ್‌ರವರಿಗೆ ಇತ್ತೀಚಿಗೆ ದ್ರೋಣಾಚಾರ್ಯ ಪ್ರಶಸ್ತಿಯೂ ಲಭಿಸಿದ್ದು ಅವರ ತರಬೇತಿಯಲ್ಲಿ ಅನೇಕ ಕ್ರೀಡಾಪಟುಗಳು ಅರ್ಜುನಪ್ರಶಸ್ತಿಯನ್ನೂ ಪಡೆದಿದ್ದಾರೆ.








# ಕರಾಟೆ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮುಂಡಗೋಡದ ಯುವಕ



ಅಪ್ಪ ಟ್ಯಾಕ್ಸಿ ಚಾಲಕನಾಗಿದ್ದು, ಬಡತನದ ಪರಿಸ್ಥಿಯಲ್ಲಿಯೂ ಆತ್ಮ ರಕ್ಷಣೆಯ ಕಲೆ ಕರಾಟೆ ಕಲಿತು ಅಂತರಾಷ್ಟ್ರಮಟ್ಟದಲ್ಲಿ ಮಿಂಚುವ ಮೂಲಕ ಮುಂಡಗೋಡ ತಾಲೂಕಿನ ಹೆಸರನ್ನು ತಂದಿರುವ ಪಟ್ಟಣದ ಯುವಕನ ಸಾಧನೆ ನಿಜಕ್ಕೂ ಮೆಚ್ಚುವಂಥದ್ದಾಗಿದೆ.

ಹೌದು, ಪಟ್ಟಣದ ಟ್ಯಾಕ್ಸಿ ಚಾಲಕ ಪ್ರಮೋದ ಮತ್ತು ರಾಜೇಶ್ವರಿ ದಂಪತಿ ಪುತ್ರನಾದ ಪ್ರತೀಕ ಶಿರಾಲಿ ಅಂತಾರಾಷ್ಟ್ರೀಯ ಆನ್‌ಲೈನ್ ಕಾಟಾ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ಬಂಗಾರದ ಪದಕ ಗೆದ್ದುಕೊಂಡಿದ್ದಾನೆ. ತೀರಾ ಬಡ ಕುಟುಂಬದವನಾಗಿದ್ದು ತನ್ನ ಕರಾಟೆ ಕಲೆಯನ್ನು ಕರಗತ ಮಾಡಿಕೊಳ್ಳಲು ಪಟ್ಟ ಕಷ್ಟ ಬಹಳಷ್ಟು ಇದೆ. 6ನೇ ವರ್ಷದಲ್ಲಿಯೇ ಕರಾಟೆಯಲ್ಲಿ ಅದೇನೋ ಆಸಕ್ತಿ ಹೊಂದಿದ್ದ ಮಗನ ಆಸೆ ಈಡೇರಿಸಲು ತಂದೆ ತರಬೇತಿ ಕೇಂದ್ರಕ್ಕೆ ಒಮ್ಮೆ ಭೇಟಿ ನೀಡಿ ತನ್ನ ಮಗನ ಕರಾಟೆಯ ಆಸಕ್ತಿಯ ಬಗ್ಗೆ ಕರಾಟೆ ಮಾಸ್ಟರ್ ರಾಘವ್ ಜತೆ ಚರ್ಚಿಸಿದರು ನಂತರ ಮಾಸ್ಟರ್ ರಾಘವ್ ತರಬೇತಿ ನೀಡಲು ಆರಂಭಿಸಿದರು.



**ಮೂಲತ:** ಮುಂಡಗೋಡ ಪಟ್ಟಣದ ನಿವಾಸಿ ಪ್ರಮೋದ ಶಿರಾಲಿ ಜೀವನೋಪಾಯಕ್ಕಾಗಿ ಸದ್ಯ ಬೆಂಗಳೂರಿನಲ್ಲಿ ಟ್ಯಾಕ್ಸಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.ಪ್ರತೀಕನು ಕರಾಟೆ ವೈಟ್ ಬೆಲ್ಟ್‌ನಿಂದ ಬ್ಲ್ಯಾಕ್ ಬೆಲ್ಟ್ ಮುಗಿಸಿದ್ದಾನೆ. ಕುಂಟೆ ವಿಭಾಗದಲ್ಲಿಯೂ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿ ಪ್ರಶಸ್ತಿಯನ್ನು ಗೆದ್ದು-ಕೊಂಡು ತನ್ನ ಸಾಮರ್ಥ್ಯ ತೋರಿಸಿದ್ದಾನೆ.

**ಅಂತಾರಾಷ್ಟ್ರೀಯ ಕಾಟಾ ವಿಭಾಗದ ಸ್ಪರ್ಧೆಯು ಲಂಡನಲ್ಲಿ ನಡೆಯಬೇಕಿತ್ತು ಆದ-ರೆ ಕೊರೋನಾ ವೈರಸ್‌ನಿಂದ ಮಾ.28ರಂದು ಆನ್‌ಲೈನ್‌ನಲ್ಲಿ ನಡೆಯಿತು.ಕಾಟಾ ವಿಭಾಗದ ಸ್ಪರ್ಧೆಯಲ್ಲಿ ಭಾರತ, ಶ್ರೀಲಂಕಾ, ಸ್ಕಾಟ್‌ಲ್ಯಾಂಡ್, ಲಂಡನ್, ಕೊಲ್ಯಾಂಡ್ ಮತ್ತು ಇಟಲಿ ದೇಶಗಳಿಂದ ಕರಾಟೆ ಪಟುಗಳು ಆನ್‌ಲೈನ್ ಭಾಗವಹಿಸಿದ್ದರು. ಇದರಲ್ಲಿ ಪ್ರತೀಕ ಶಿರಾಲಿ ಪ್ರಥಮ ಸ್ಥಾನ ಪಡೆದು ಬಂಗಾರದ ಪದಕ ಪಡೆದಿದ್ದಾನೆ. ಈ ಪ್ರಶಸ್ತಿಯು ಕೊ-ರಿಯರ ಮೂಲಕ ಇವರಿಗೆ ತಲುಪಿದೆ. ಪ್ರತೀಕ ಪ್ರಸ್ತುತ ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಓದುತ್ತಾ ಸೆಲ್ಫ್ ಡಿಫೆನ್ಸ್ ಅಕಾಡೆಮಿಯ ಕರಾ-ಟೆ ಮಾಸ್ಟರ್ ರಾಘವ್ ಅವರ ಬಳಿ ತರಬೇತಿ ಪಡೆಯುತ್ತಿದ್ದಾನೆ.**

ಪ್ರತೀಕ ಪ್ರಮೋದ ಶಿರಾಲಿ, ಬಂಗಾರದ ಪದಕ ಗೆದ್ದ ಯುವಕ : ನಾನು ಚಿಕ್ಕ ವಯಸ್ಸಿನಲ್ಲಿಯೇ ಕರಾಟೆಯ ಬಗ್ಗೆ ಬಹಳ ಆಸಕ್ತಿ ಹೊಂದಿದೆನು. ನಮ್ಮ ತಂದೆ ಬೆಂಗಳೂರಿನಲ್ಲಿ ಟ್ಯಾಕ್ಸಿ ಚಾಲನೆ ಮಾಡುತ್ತಲೇ ನನ್ನ ವಿಧ್ಯಾಭ್ಯಾಸ ಕಲಿಸುವ ಜತೆಗೆ ಕರಾಟೆ ಕಲಿಸಿದರು. ಈ ಸಾದನೆ ಮಾಡಲು ತಂದೆ-ತಾಯಿ ಮತ್ತು ಮಾಸ್ಟರ್ ರಾಘವ್ ಸರ್ ಅವರ ಪ್ರೋತ್ಸಾಹ ಸಿಕ್ಕಿದ್ದರಿಂದ ಅಂತಾರಾಷ್ಟ್ರೀಯ ಆನ್‌ಲೈನ್ ಕಾಟಾ ವಿಭಾಗದಲ್ಲಿ ಬಂಗಾರದ ಪದಕ ಸಿಕ್ಕದೆ.

**ಪ್ರಮೋದ ಶಿರಾಲಿ ಯುವಕನ ತಂದೆ:** ಕಷ್ಟಪಟ್ಟು ಈ ಕಲೆಯನ್ನು ಕಲಿತು ಸಾಧನೆ ಮಾಡಿದ್ದಾನೆ. ಇದರಿಂದ ನಮಗೆ ಬಹಳ ಸಂತೋಷವಾಗಿದೆ. ಮುಂದೆ ಇನ್ನೂ ಹೆಚ್ಚಿನ ಸಾಧನೆ ಮಾಡುವ ಗುರಿಯನ್ನು ನಮ್ಮ ಮಗ ಹೊಂದಿದ್ದಾನೆ. ನನಗೆ ಎಷ್ಟೇ ಕಷ್ಟ ಇದ್ದರೂ ಆತನ ಮೇಲೆ ಹಾಕುವುದಿಲ್ಲ. ಇನ್ನು ಹೆಚ್ಚಿನ ಸಾಧನೆ ಮಾಡಿ ಮುಂಡಗೋಡ ತಾಲೂಕಿನ ಹೆಸರು ಅಂತರಾಷ್ಟ್ರಮಟ್ಟದಲ್ಲಿ ಬರುವಂತೆ ಮಾಡಲಿ ಎಂದು ಹಾರೈಸುತ್ತೇನೆ.

# ಮಿಂಚಿನ ಓಟದ ಪ್ರತಿಭೆ
## ನಯನಾ ಕೊಕರೆ


ಮುಂಡಗೋಡ: ದೆಹಲಿಯಲ್ಲಿ ನಡೆದ ರಾಷ್ಟಿಯ ಕ್ರೀಡಾ ಕೂಟದಲ್ಲಿ ತಾಲೂಕಿನ ಚಳಗೇರಿಯ ನಯನಾ ಕೊಕರೆ ಗ್ರಾಮೀಣ ಭಾಗದ ಪ್ರತಿಭೆ ಮೂರನೇ ಸ್ಥಾನ ಪಡೆದು ರಾಜ್ಯದ ಕೀರ್ತಿ ಪತಾಕೆ ಹಾರಿಸಿದ್ದಾರೆ.

ಅಥ್ಲೆಟಿಕ್ ಫೆಡರೇಷನ್ ಆಫ್ ಇಂಡಿಯಾ ಆಶ್ರಯದಲ್ಲಿ ದೆಹಲಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಮುಕ್ತಾಯಗೊಂಡ ಮೂರನೇ ರಾಷ್ಟೀಯ ಮುಕ್ತ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ, ಕರ್ನಾಟಕ ತಂಡದಿಂದ ಆಡಿದ ನಯನಾ ಎರಡು ದಿನ ನಡೆದ 18ವರ್ಷ ಒಳಗಿನವರ 400ಮೀಟರ್ ಓಟದಲ್ಲಿ 58.31 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಮೂರನೇ ಸ್ಥಾನ ಪಡೆದು ಅವರು ಉತ್ತಮ ಸಾಧನೆ ಮಾಡಿ ರಾಜ್ಯಕ್ಕೆ ಹೆಸರು ತಂದು ಕೊಟ್ಟಿದ್ದಾರೆ.

ತಾಲ್ಲೂಕಿನ ಕಾಡಿನಂಚಿನ ಚಳಗೇರಿ ಗ್ರಾಮದ ಗೌಳಿ ಸಮುದಾಯದ ನಯನಾ ಕೊಕರೆ ಮಿಂಚಿನ ಓಟದ ಪ್ರತಿಭೆಯಾಗಿದ್ದಾಳೆ. ಚಳಗೇರಿ ಪ್ರಾಥಮಿಕ ಶಾಲೆಯಲ್ಲಿ ಏಳನೇ ತರಗತಿವರೆಗೆ ಓದಿ, ಕಾತೂರ ಪ್ರೌಢಶಾಲೆಯಲ್ಲಿ ಒಂಬತ್ತು ಹಾಗೂ ಲೊಯೋಲಾ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ಕಲಿತು ಈಗ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ ಓದುತ್ತಿದ್ದಾರೆ.

ಈ ಹಿಂದೆ ಮಂಡ್ಯದಲ್ಲಿ ನಡೆದಿದ್ದ ರಾಜ್ಯಮಟ್ಟದ ಅಥ್ಲೆಟಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದು– ಕೊಂಡಿದ್ದೆ. ಆಂದ್ರ ಪ್ರದೇಶದಲ್ಲಿ ನಡೆದಿದ್ದ ದಕ್ಷಿಣ ವಲಯ ಜೂನಿಯರ್ ಅಥ್ಲೆಟಿಕ್ಸ್‌ನಲ್ಲಿ ಅಂತಿಮ ಹಂತಕ್ಕೆ ಆಯ್ಕೆಗೊಂಡಿದ್ದು ಉತ್ತಮ ಸಾಧನೆಯಾಗಿತ್ತು. ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಪಾಲ್ಗೊಂಡು ಉತ್ತಮ ಸಾಧನೆ ಮಾಡಬೇಕು ಎಂದು ಆಸೆ ಇದೆ ಎಂಬುದು ನಯನಾಳ ಆಸೆಯಾಗಿದೆ.

ಬಡತನದಲ್ಲಿಯು ಯುವತಿಯ ಸಾಧನೆ ಮಾಡಿರುವುದು ಹೆಮ್ಮೆಯ ವಿಷಯ ಈ ಹಿಂದೆ ಕರಗಿನಕೊಪ್ಪದ ಲೊಯೋಲಾ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಓದುತ್ತ, ರಾಷ್ಟಮಟ್ಟದ ಅಥ್ಲೆಟಿಕ್ಸ್‌ನಲ್ಲಿ ಉತ್ತಮ ಸಾಧನೆ ತೋರಿದ್ದಾರೆ. ಕಡಿಮೆ ಅವಧಿಯಲ್ಲಿ ಕಠಿಣ ತರಬೇತಿ ಪಡೆಯುತ್ತಾ ದಕ್ಷಿಣ ಅಮೇರಿಕಾದ ಜಮೈಕಾದ ಕಿಂಗ್‌ಸ್ಟನ್‌ನಲ್ಲಿ ನಡೆದ ಕ್ರೀಡಾ ತರಬೇತಿಗೆ ಕೂಡ ಆಯ್ಕೆಯಾಗಿದ್ದರು. ಬ್ರಿಡ್ಜಸ್ ಆಫ್ ಸ್ಪೋರ್ಟ್ಸ್‌ನಿಂದ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದರು. ಅಂತರ ಜಿಲ್ಲಾ ಜೂನಿಯರ ಕ್ರೀಡಾಕೂಟ ದಲ್ಲಿ ಪಾಲ್ಗೊಂಡು, ಉತ್ತಮ ಸಾಧನೆ ತೋರಿದ್ದಾರೆ, ಕ್ರೀಡಾ ಪ್ರತಿಭಾನ್ವೇಷಣೆಯಲ್ಲಿಯೂ ಉತ್ತಮ ಸಾಧನೆ ತೋರಿದ್ದಾರೆ. ರಾಷ್ಟ್ರೀಯ ಹಾಗೂ ಅಂತರಾಷ್ಟ್ರಿಯ ಮಟ್ಟದಲ್ಲಿ ಬೆಳೆದು ದೇಶ, ರಾಜ್ಯ ಹಾಗೂ ತಾಲೂಕಿನಗೆ ಕೀರ್ತಿ ತರಲಿ ಇನ್ನೂ ಎತ್ತರಕ್ಕೆ ಹೆಸರು ಮಾಡಲಿ ಎಂಬುದು ನಮ್ಮ ಸಮಾಜ ಬಂದುಗಳ ಆಸೆ ಎಂದು ಗೌಳಿ ಸಮುದಾಯದ ಹಾರೈಕೆಯಾಗಿದೆ.



# ವೃಕ್ಷ ಮಾತೆ ತುಳಸಿ ಗೌಡ

**ಭಾರತ ಸರಕಾರದ 2020 ನೇ ಸಾಲಿನ ಪದ್ಮಶ್ರೀ ಪ್ರಶಸ್ತಿಯನ್ನು ರಾಷ್ಟ್ರಪತಿಗಳಿಂದ ಸ್ವೀಕರಿಸಿರುವ ನಮ್ಮ ಉತ್ತರಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಹೊನ್ನಳ್ಳಿ ಗ್ರಾಮದ ವೃಕ್ಷ ಮಾತೆ ಎಂದೇ ಹೆಸರಾಗಿರುವ ಹಾಲಕ್ಕಿ ಸಮುದಾಯದ ಹಿರಿಯ ಚೇತನ ಶ್ರೀಮತಿ ತುಳಸಿ ಗೌಡ ಅವರಿಗೆ ಜಿಲ್ಲೆಯ ಜನತೆಯ ಪರವಾಗಿ ಹಾರ್ದಿಕ ಅಭಿನಂದನೆಗಳು.**



ಅಂಕೋಲ ತಾಲೂಕಿನ ಹೊನ್ನಳ್ಳಿಗ್ರಾಮದ ನಾರಾಯಣ ಹಾಗೂ ನೀಲಿ ದಂಪತಿಗೆ 1944 ರಲ್ಲಿ ಜನಿಸಿದವರುತುಳಸಿ ಗೌಡ ಅವರು ಬಡತನದ ಜತೆಗೆ ತನ್ನ ಎರಡನೇ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು, ಶಾಲೆ ಮೆಟ್ಟಿಲನ್ನು ಏರದೆ ತಾಯಿಯ ಜೊತೆ ಕೂಲಿ ಕೆಲಸಕ್ಕೆ ತೆರಳಲು ಪ್ರಾರಂಭಿಸಿದ್ದರು. ಗೋವಿಂದೇ ಗೌಡ ಎನ್ನುವವರ ಜತೆ ಬಾಲ್ಯ ವಿವಾಹವಾದ ತುಳಸಿ ಗೌಡರು, ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನೂ ಕಳೆದುಕೊಂಡು ವಿಧವೆಯಾದರು.

ಪರಿಸರ ಪ್ರೇಮ ಅನ್ನುವುದು ಈಕೆಗೆ ಹುಟ್ಟಿನಿಂದ ಬಂದಿತ್ತು. ಊರಿನವರ ಜೊತೆ ಕಟ್ಟಿಗೆ ತರುವ ಕೆಲಸವನ್ನ ಮಾಡಿ ಪ್ರತಿನಿತ್ಯ ಐದರಿಂದ ಆರು ರೂಪಾಯಿ ದುಡಿಯುತ್ತಿದ್ದ ತುಳಸಿಗೆ ಅರಣ್ಯ ಇಲಾಖೆ ಬೀಜಗಳನ್ನು ಶೇಖರಣೆ ಮಾಡಿ ಸಸಿಗಳನ್ನಾಗಿ ಮಾಡಿಕೊಡುವ ಕೆಲಸವನ್ನು ಹಚ್ಚಿತು. ಪರಿಸರದ ಮೇಲೆ ಕಾಳಜಿ ಇದ್ದುದರಿಂದ ಬೀಜಗಳನ್ನು ತಂದು ಸಸಿ ಮಾಡುವ ಕೆಲಸ ಪ್ರಾರಂಭಿಸಿದರು ತುಳಸಿ ಗೌಡ. ಕೇವಲ 1.25 ಪೈಸೆ ದಿನದ ಕೂಲಿಗೆ ಈ ಕೆಲಸವನ್ನ ಮಾಡುತ್ತಿದ್ದ ತುಳಸಿ ಗೌಡರಿಗೆ, ಕಡಿಮೆ ಕೂಲಿಗೆ ಸಸಿ ಮಾಡುವ ಕೆಲಸ ಬೇಡ ಎಂದು ಎಲ್ಲರೂ ಹೇಳಿದರು. ಆದರೆ ಪರಿಸರ ಕಾಳಜಿಯಿಂದ ಅವರು ಕೆಲಸವನ್ನು ಮಾತ್ರ ನಿಲ್ಲಿಸಲಿಲ್ಲ. ವರ್ಷಕ್ಕೆ 30 ಸಾವಿರ ಗಿಡಗಳ ನಾಟಿ ಇದರೊಂದಿಗೆ ತಾನು ಬೆಳೆಸಿದ ಸಸಿಗಳನ್ನು ಹೊನ್ನಳ್ಳಿ ಭಾಗದ ಅರಣ್ಯ ಪ್ರದೇಶದಲ್ಲಿ, ಸರ್ಕಾರಿ ಕಛೇರಿ, ಶಾಲೆ, ಮನೆಗಳ ಆವರಣ, ರಸ್ತೆಗಳ ಪಕ್ಕದಲ್ಲಿ ನೆಡಲು ಪ್ರಾರಂಭಿಸಿದರು. ವರ್ಷಕ್ಕೆ ಈಕೆ ಸುಮಾರು 30 ಸಾವಿರ ಸಸಿಗಳನ್ನ ನೆಟ್ಟು ಪೋಷಿಸುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಾ ಬಂದರು. ಈಕೆ ನೆಟ್ಟು ಪೋಷಿಸಿದ ಸಸಿಗಳು ಇಂದು ಬೆಳೆದು




**ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ತುಳಸಿ ಗೌಡ ಅವರನ್ನು ಸಚಿವರಾದ ಶ್ರೀ ಶಿವರಾಮ ಹೆಬ್ಬಾರ್ ಅವರು ಸನ್ಮಾನಿಸಿದಸಂದರ್ಭ**

ಹೆಮ್ಮರವಾಗಿ ಸಾವಿರಾರು ಜನರಿಗೆ ಗಾಳಿ ನೆರಳನ್ನ ಕೊಡುವ ಕೆಲಸ ಮಾಡುತ್ತಿವೆ. ಪರಿಸರದ ಮೇಲಿನ ಈಕೆಯ ಪ್ರೀತಿಯನ್ನ ಕಂಡು ಅಂದಿನ ಅರಣ್ಯಾಧಿಕಾರಿಯಾಗಿದ್ದ ಅ.ನಾ ಯಲ್ಲಪ್ಪ ರೆಡ್ಡಿ ಈಕೆಗೆ ಮಾಸ್ತಿಕಟ್ಟೆ ಅರಣ್ಯ ವಲಯದಲ್ಲಿ ಸಸಿಗಳನ್ನು ಪೋಷಿಸುವ ಕೆಲಸವನ್ನು ಸಹ ಕೊಡಿಸಿದ್ದರು. ತುಳಸಿ ಪರಿಸರ ಪ್ರೀತಿ ಎಷ್ಟಿದೆ

ಎಂದರೆ ಈಕೆಯನ್ನ ಮರಗಳ ವಿಜ್ಞಾನಿ ಎಂದೇ ಹೇಳಬಹುದು. ಯಾವ ಯಾವ ಗಿಡಗಳನ್ನ ಯಾವ ಯಾವ ಋತುವಿನಲ್ಲಿ ನೆಡಬೇಕು. ಎಷ್ಟು ನೀರು ಗೊಬ್ಬರ ಬೇಕು. ಯಾವ ಗಿಡಗಳು ಯಾವ ಸಂದರ್ಭದಲ್ಲಿ ಹೂವು ಹಣ್ಣು ಬಿಡುತ್ತವೆ. ಹೀಗೆ ಅರಣ್ಯದಲ್ಲಿನ ಸುಮಾರು 300ಕ್ಕೂ ಹೆಚ್ಚು ಪ್ರಭೇದದ ಮರಗಳ ಬಗ್ಗೆ ಇವರ ಅಂಗೈಯಲ್ಲೇ ಮಾಹಿತಿ ಇದೆ. ಅರಣ್ಯದಲ್ಲಿನ ಪ್ರತಿ ಮರಗಳ ನಾಡಿ ಮಿಡಿತವೂ ಇವರಿಗೆ ಗೊತ್ತು. ತನ್ನ ಸುತ್ತಮುತ್ತಲೂ ಯಾರುಕೂಡ ಮರಗಳನ್ನ ಕಡಿಯದಂತೆ ನೋಡಿಕೊಂಡಿದ್ದಾರೆ.

ಕೆಲವೊಮ್ಮೆ ಅರಣ್ಯದಲ್ಲಿ ತಾನು ನೆಟ್ಟ ಮರವನ್ನ ಮರಗಳ್ಳರು ಕಡಿದಾಗ ತುಳಸಿ ಕಡಿದ ಮರವನ್ನ ಅಪ್ಪಿ ಅತ್ತ ಘಟನೆಗಳು ಸಾಕಷ್ಟಿವೆ. ಈಕೆ ಲಕ್ಷಾಂತರ ಮರಗಳನ್ನ ಬೆಳೆಸಿಯೂ ಇಂದಿಗೂ ಬೀಜದಿಂದ ಸಸಿ ಮಾಡಿ ನಂತರ ನೆಟ್ಟು ಪೋಷಿಸುವ ಕೆಲಸವನ್ನ ಮುಂದುವರೆಸಿದ್ದಾರೆ.








# ಇ-ಶ್ರಮ (e-Shram )

ಅಸಂಘಟಿತ ವಲಯದ ಕಾರ್ಮಿಕರ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸೋ ಉದ್ದೇಶದಿಂದ ಕೇಂದ್ರ ಸರ್ಕಾರ ಆಗಸ್ಟ್ 26ರಂದು ಇ-ಶ್ರಮ (e-Shram ) ಪೋರ್ಟಲ್‌ಗೆ ಚಾಲನೆ ನೀಡಿದ್ದು ರಾಜ್ಯದಲ್ಲಿಯು ಸಹ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ಹಾಗೂ ಕಾರ್ಮಿಕ ಸಚಿವರಾದ ಶ್ರೀ ಶಿವರಾಮ ಹೆಬ್ಬಾರ್ ಅವರು ಚಾಲನೆ ನೀಡಿದ್ದಾರೆ.ಈಗಾಗಲೇ ಹತ್ತು ಕೋಟಿಗೂ ಅಧಿಕ ಕಾರ್ಮಿಕರು ಈ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿದ್ದಾರೆ. ಇ-ಶ್ರಮ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿದ ಕಾರ್ಮಿಕರಿಗೆ ಇ-ಶ್ರಮ ಕಾರ್ಡ್, ಕೋವಿಡ್ ಪರಿಹಾರ ಯೋಜನೆ, ಅಟಲ್ ವಿಮಾ ಕಲ್ಯಾಣ ಯೋಜನೆ ಪ್ರಯೋಜನ ಸಿಗಲಿದೆ.

ಕಟ್ಟಡ ನಿರ್ಮಾಣ ಕಾರ್ಮಿಕರು, ವಲಸೆ ಕಾರ್ಮಿಕರು, ಮನೆಗೆಲಸದವರು, ರಸ್ತೆಬದಿ ವ್ಯಾಪಾರಿಗಳು ಸೇರಿದಂತೆ ಅಸಂಘಟಿತ ವಲಯದ 38 ಕೋಟಿ ಕಾರ್ಮಿಕರ ನೋಂದಣಿ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಇದೇ ಕಾರಣಕ್ಕೆ ಇ-ಶ್ರಮ ಪೋರ್ಟಲ್ ಪ್ರಾರಂಭಿಸಿದ್ದು, ಇದರಲ್ಲಿ ಕಾರ್ಮಿಕರು ತಮ್ಮ ಹೆಸರು ಮತ್ತು ಮಾಹಿತಿ ನೋಂದಾಯಿಸಬಹುದು. ಹೀಗೆ ಹೆಸರು ನೋಂದಾಯಿಸಿದ ಕಾರ್ಮಿಕರಿಗೆ ವಿಶಿಷ್ಟ ಗುರುತು ಸಂಖ್ಯೆ ಹೊಂದಿರೋ ಇ-ಶ್ರಮ ಕಾರ್ಡ್ ನೀಡಲಾಗುತ್ತದೆ.

**ನೊಂದಾವಣಿ ಮಾಡುವ ವಿಧಾನ** :

ಕಾರ್ಮಿಕರು https://eshram.gov.in ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಬೇಕು. ಈ ಪೋರ್ಟಲ್‌ಗೆ ಭೇಟಿ ನೀಡಿ ನೋಂದಣಿ ಲಿಂಕ್ ಮೇಲೆ ಕ್ಲಿಕ್ ಮಾಡಿ ಅಗತ್ಯ ಮಾಹಿತಿ ಭರ್ತಿ ಮಾಡಬೇಕು. ನೋಂದಣಿ ಯಶಸ್ವಿಯಾದ್ರೆ ವಿಶಿಷ್ಟ ಸಂಖ್ಯೆ ಹೊಂದಿರೋ ಇ-ಶ್ರಮ ಕಾರ್ಡ್ ನೀಡಲಾಗುತ್ತದೆ. ಕಾರ್ಮಿಕರು ಸ್ವತಃ ನೋಂದಣಿ ಮಾಡಿಕೊಳ್ಳಬಹುದು. ಇಲ್ಲವೆ ಸಾಮಾನ್ಯ ಸೇವಾ ಕೇಂದ್ರಗಳು ಅಥವಾ ಪ್ರಾದೇಶಿಕ ಕಚೇರಿಗಳ ಮೂಲಕ ಕೂಡ ನೋಂದಣಿ ಮಾಡಿಸಬಹುದು. ನೋಂದಣಿಗೆ ಯಾವುದೇ ಶುಲ್ಕ ವಿಧಿಸಿಲ್ಲ.

**ಇ – ಶ್ರಮ್ ಕಾರ್ಡ್ ಲಾಭಗಳು** :

ನೋಂದಾಯಿತ ಕಾರ್ಮಿಕರು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (ಪಿಎಂಎಸ್‌ಬಿವೈ) ಅಡಿಯಲ್ಲಿ 2 ಲಕ್ಷ ರೂ. ಅಪಘಾತ ವಿಮಾ ಕವರೇಜ್ ಪಡೆಯುತ್ತಾರೆ. ಕಾರ್ಮಿಕ ಆಕಸ್ಮಿಕವಾಗಿ ಮರಣ ಹೊಂದಿದ್ರೆ ಅಥವಾ ಶಾಶ್ವತ ಅಂಗವೈಕಲ್ಯಕ್ಕೊಳಗಾದ್ರೆ 2 ಲಕ್ಷ ರೂ. ಸಿಗಲಿದೆ.

ಅಸಂಘಟಿತ ಕಾರ್ಮಿಕರಿಗೆ ಲಭ್ಯವಿರೋ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಎಲ್ಲಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನ ಪಡೆಯಲು ನೋಂದಾಯಿತ ಕಾರ್ಮಿಕ ಅರ್ಹನಾಗಿದ್ದಾನೆ. ತುರ್ತು ಸಂದರ್ಭ ಹಾಗೂ ರಾಷ್ಟ್ರೀಯ ವಿಪತ್ತಿನ ಸಮಯದಲ್ಲಿ ಇ-ಶ್ರಮ ಕಾರ್ಡ್ ಹೊಂದಿರೋರು ಎಲ್ಲ ರೀತಿಯ ನೆರವನ್ನು ಪಡೆಯಲು ಅರ್ಹರಾಗಿರುತ್ತಾರೆ.



**ಅಗತ್ಯ ದಾಖಲೆಗಳು** : ಹೆಸರು, ಉದ್ಯೋಗ, ಕಾಯಂ ವಿಳಾಸ, ವಿದ್ಯಾರ್ಹತೆ, ಕೌಶಲ್ಯ ಹಾಗೂ ಅನುಭವದ ಮಾಹಿತಿ, ಕುಟುಂಬ ಸದಸ್ಯರ ಮಾಹಿತಿ, ಆಧಾರ್ ಸಂಖ್ಯೆ, ಆಧಾರ್ ಸಂಖ್ಯೆಗೆ ಜೋಡಣೆಯಾಗಿರೋ ಮೊಬೈಲ್ ನಂಬರ್, ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್. ಎಸ್ಸಿ ಕೋಡ್ ಮಾಹಿತಿಗಳಿಗೆ ಅವುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಹೊಂದಿರಬೇಕು.

# ಕಾರ್ಮಿಕ ಇಲಾಖೆಯಿಂದ ಶ್ರಮಿಕ ವರ್ಗಕ್ಕೆ ಮತ್ತೊಂದುಕೊಡುಗೆ ಕಾರ್ಮಿಕರಿಗೆ ರಾಜ್ಯದಾದ್ಯಂತ

# ಉಚಿತ ಬಸ್ ಪಾಸ್









ಬೆಂಗಳೂರು: ರಾಜ್ಯದ ಶ್ರಮಿಕ ವರ್ಗದ ಸಂಕ್ಷೇಮಕ್ಕೆ ಶ್ರಮಿಸುತ್ತಿರುವ ಕಾರ್ಮಿಕ ಇಲಾಖೆಯು ಇದೀಗ ಮತ್ತೊಂದು ಮಹತ್ವಾಕಾಂಕ್ಷಿ ಯೋಜನೆ ಜಾರಿಗೆ ಮುಂದಡಿ ಇರಿಸಿದೆ.

ಕೋವಿಡ್ 1 ಮತ್ತು 2ನೇ ಅಲೆ ವೇಳೆ ಸಹಾಯಧನ, ಆಹಾರಕಿಟ್, ಲಸಿಕೆ, ತಮ್ಮೂರುಗಳಿಗೆ ತೆರಳಲು ಸಾರಿಗೆ ವ್ಯವಸ್ಥೆ ಮಾಡಿದ್ದ ಇಲಾಖೆಯು ಇದೀಗ ಕಾರ್ಮಿಕರು ತಮ್ಮ ಕೆಲಸದ ಪ್ರದೇಶಗಳಿಗೆ ತೆರಳಲು ಅನುವಾಗುವಂತೆ ಉಚಿತ ಸಾರಿಗೆ ಸೇವೆ ಒದಗಿಸಲು ಮುಂದಡಿ ಇರಿಸಿದೆ.

ಬೆಂಗಳೂರು ಮಹಾನಗರದಲ್ಲಿ ಈಗಾಗಲೇ ಈ ಉಚಿತ ಸೇವೆಯನ್ನು ಜಾರಿ ಮಾಡಿರುವ ಕಾರ್ಮಿಕ ಇಲಾಖೆಯ ಕಲ್ಯಾಣ ಮಂಡಳಿಯು ಈ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲು ಮುಂದಡಿ ಇರಿಸಿದೆ.

ಬಿಎಂಟಿಸಿಯಿಂದ ಜಾರಿ: ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಅವರ ಪ್ರಯತ್ನದ ಫಲವಾಗಿ ಈ ಸಂಬಂಧ ಸಾರಿಗೆ ಇಲಾಖೆ ಜತೆ ಹಲವಾರು ಸುತ್ತಿನ ಮಾತುಕತೆಗಳು ನಡೆದಿದ್ದು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಈಗಾಗಲೇ ಈ ಯೋಜನೆಯನ್ನು ಜಾರಿಗೊಳಿಸಿದೆ.

ದಿನ ನಿತ್ಯ ಕೂಲಿಗಾಗಿ ತೆರಳುವ ಕಟ್ಟಡ ಕಾರ್ಮಿಕರಿಗೆ ಈ ಯೋಜನೆ ಲಾಭದಾಯಕ, ಪ್ರತಿ ನಿತ್ಯ ಅವರು ಕೆಲಸ ನಿರ್ವಹಣೆಗೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತೆರಳಲು ಕನಿಷ್ಠ 150 ರಿಂದ 200 ರೂ. ವ್ಯಯಿಸಬೇಕಾದ ಪರಿಸ್ಥಿತಿ ಇದೆ, ಇದರಿಂದ ಅವರು ಪಡೆಯುವ ಕೂಲಿ ಮೊತ್ತದ ಬಹುಭಾಗವನ್ನು ಸಾರಿಗೆಗೆ ವ್ಯಯಿಸುತ್ತದೆ. ಇದನ್ನು ಮನಗಂಡ ಸಚಿವ ಶಿವರಾಂ ಹೆಬ್ಬಾರ್, ಕಟ್ಟಡ ಕಾರ್ಮಿಕರ ಅನುಕೂಲಕ್ಕಾಗಿ ಉಚಿತ ಸಾರಿಗೆ ವ್ಯವಸ್ಥೆಯ ಯೋಜನೆಗೆ ಚಾಲನೆ ನೀಡಿದರು.

ಕಾರ್ಮಿಕ ಕಲ್ಯಾಣ ಮಂಡಳಿಯ ನೊಂದಾಯಿತ ಕಾರ್ಮಿಕರು ಈ ಯೋಜನೆಯ ಲಾಭ ಪಡೆಯಬಹುದಾಗಿದೆ ಎಂದು ಇಲಾಖೆ

ತಿಳಿಸಿದೆ.

ರಾಜ್ಯದಾದ್ಯಂತ ವಿಸ್ತರಣೆಗೆ ಸಿದ್ಧತೆ: ಈಗಾಗಲೇ ಬೆಂಗಳೂರು ಮಹಾನಗರದಲ್ಲಿ ಜಾರಿ ಆಗಿರುವ ಉಚಿತ ಸಾರಿಗೆ ಸೇವೆಯನ್ನು ರಾಜ್ಯದಾದ್ಯಂತ ವಿಸ್ತರಣೆ ಮಾಡಲು ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಮುಂದಡಿ ಇರಿಸಿದ್ದು, ಈ ಸಂಬಂಧ ಸಾರಿಗೆ ಇಲಾಖೆಯ ಜತೆ ಹಲವು ಸುತ್ತಿನ ಮಾತುಕತೆ ನಡೆಸಿದ್ದಾರೆ, ಕೆಎಸ್‌ಆರ್‌ಟಿಸಿ, ಈಶಾನ್ಯ, ವಾಯುವ್ಯ ಸಾರಿಗೆ ಹೀಗೆ ಎಲ್ಲ ಸಾರಿಗೆ ಸಂಸ್ಥೆಗಳೊಂದಿಗೆ ಯೋಜನೆ ತ್ವರಿತ ಜಾರಿಗೆ ಸಂಬಂಧ ಮಹತ್ವದ ಸಭೆಗಳನ್ನು ನಡೆಸಲಾಗಿದೆ.


**ಅಸಾಧ್ಯವೆಂದ ಸಾರಿಗೆ ಸಂಸ್ಥೆಗಳು – ಶ್ರಮಿಕರ ಕೈಹಿಡಿದ ಕಲ್ಯಾಣ ಮಂಡಳಿ:**

ಕರ್ನಾಟಕ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಬಸ್ ಸೇವೆ ಜಾರಿಗೆ ಕಾರ್ಮಿಕ ಇಲಾಖೆ ಮುಂದಡಿ ಇರಿಸಿತ್ತು. ಈ ಸಂದರ್ಭದಲ್ಲಿ ಇಲಾಖೆಯು ಶೇ.80ರಷ್ಟನ್ನು ತಾನು ಭರಿಸುವ ಭರವಸೆ ನೀಡಿತ್ತಲ್ಲದೆ, ಇನ್ನುಳಿದ ಶೇ.20ರಷ್ಟನ್ನು ರಿಯಾಯ್ತಿ ನೀಡುವುದು ಅಥವಾ ಸಾರಿಗೆ ಇಲಾಖೆಯೇ ಭರಿಸುವ ಪ್ರಸ್ತಾವನೆಯನ್ನು ಇರಿಸಿತ್ತು. ಆರಂಭಿಕ ಹಂತದಲ್ಲಿ ಈ ಪ್ರಸ್ತಾವನೆಗೆ ಮೌಖಿಕ ಸಮ್ಮತಿ ಸೂಚಿಸಿದ್ದ ಸಾರಿಗೆ ಇಲಾಖೆ ಇದೀಗ "ತನ್ನ ಆರ್ಥಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ ಶೇ.20 ರಿಯಾಯ್ತಿ ಅಥವಾ ತಾನು ಭರಿಸುವುದು ಅಸಾಧ್ಯ" ಎಂದು ತಿಳಿಸಿದೆ. ಹೀಗಾಗಿ ಶ್ರಮಿಕ ವರ್ಗದ ಏಳಿಗೆಯ ಏಕಮೇವ ಉದ್ದೇಶದಿಂದ ಜಾರಿ ಮಾಡಲಾಗುತ್ತಿರುವ ಈ ಯೋಜನೆ ಅನುಷ್ಠಾನದ ಕಡಕ್ ನಿರ್ಧಾರ ಕೈಗೊಂಡಿರುವ ಕಾರ್ಮಿಕ ಸಚಿವರು, ಶೇ.100ರಷ್ಟು ಮೊತ್ತವನ್ನು ಪಾವತಿಸಿಯಾದರೂ ರಾಜ್ಯದಾದ್ಯಂತ ಜಾರಿ ಮಾಡುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಹೀಗಾಗಿ ಶೀಘ್ರವೇ ರಾಜ್ಯದಾದ್ಯಂತ ಶ್ರಮಿಕ ವರ್ಗಕ್ಕೆ ಉಚಿತ ಬಸ್ ಪಾಸ್ ನೀಡುವ ಮಹತ್ವಾಕಾಂಕ್ಷಿ ಯೋಜನೆಯ ಜಾರಿಗೆ ವೇದಿಕೆ ಸಿದ್ಧಗೊಂಡಿದೆ.



ಜಾಗತಿಕ ಸಾಂಕ್ರಾಮಿಕ ಕೋವಿಡ್–19 ಎರಡೂ ಅಲೆಗಳ ಸಂದರ್ಭದಲ್ಲಿ ಸಂಘಟಿತ– ಅಸಂಘಟಿತ ಸೇರಿದಂತೆ ಎಲ್ಲ ಶ್ರಮಿಕವರ್ಗಕ್ಕೆ ಹಲವು ಯೋಜನೆಗಳ ಮೂಲಕ ಸಾಂತ್ವನ ಕ್ರಮಗಳನ್ನು ಕೈಗೊಳ್ಳಲಾಗಿತ್ತು, ಕೋವಿಡ್ ನಂತರ ಕಾರ್ಮಿಕ ಅದಾಲತ್‌ನಂತಹ ಐತಿಹಾಸಿಕ ಕಾರ್ಯಕ್ರಮ ಜಾರಿ ಮಾಡಿ ಇಲಾಖೆಯು ಶ್ರಮಿಕನಿಗೆ ಇನ್ನಷ್ಟು ಹತ್ತಿರವಾಯಿತು, ಇಲಾಖೆಯು ತನ್ನ ಇದೇ ಧೋರಣೆಯನ್ನು ಮುಂದುವರೆಸಿದ್ದು, ಶ್ರಮಿಕರ ಏಳಿಗೆಗೆ ಅನುವಾಗುವಂತೆ ಉಚಿತ ಸಾರಿಗೆ ಸೇವೆ ಯೋಜನೆ ಜಾರಿಗೆ ಮುಂದಡಿ ಇರಿಸಿದೆ.

**ಶ್ರೀ ಶಿವರಾಮ ಹೆಬ್ಬಾರ್**
ಕಾರ್ಮಿಕ ಸಚಿವರು ಕರ್ನಾಟಕ ಸರಕಾರ ಹಾಗೂ
ಉತ್ತರಕನ್ನಡ ಉಸ್ತುವಾರಿ ಸಚಿವರು




## ಬಿಎಂಟಿಸಿ ಉಚಿತ ಪಾಸ್ ಪಡೆಯುವುದು ಹೇಗೆ?

### ಅರ್ಹತೆ:

1. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ನೊಂದಾಯಿಸಿಕೊಂಡಿರಬೇಕು.
2. ಮಂಡಳಿ ಗುರುತಿನ ಚೀಟಿ
3. ಎರಡು ಸ್ಟಾಂಪ್ ಅಳತೆಯ ಭಾವಚಿತ್ರ
4. ಆಧಾರ್ ಕಾರ್ಡ್ ಪ್ರತಿ

## ಎಲ್ಲೆಲ್ಲಿ ಲಭ್ಯ?




ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಕಛೇರಿಗಳನ್ನು ದಾಖಲೆಗಳನ್ನು ಸಲ್ಲಿಸಿ ಪಾಸ್‌ಗಳನ್ನು ಪಡೆದುಕೊಳ್ಳಬಹುದು.



# ನಮ್ಮೂರ ಪ್ರವಾಸಿತಾಣ


## ಸಾತೋಡಿ ಜಲಪಾತ.

ಉತ್ತರ ಕನ್ನಡ ಜಿಲ್ಲೆ, ಜಲಪಾತಗಳಿಗೆ ತವರು ಮನೆ. ಜಲಪಾತಗಳ ಜಿಲ್ಲೆಯೆಂದೇ ಕೆಲವೊಮ್ಮೆ ಕರೆಸಿಕೊಳ್ಳುವ ಈ ಪ್ರದೇಶ, ಮಳೆಗಾಲದ ದಿನಗಳಲ್ಲಿ ಜಿಲ್ಲೆಯ ಹಳ್ಳಿಗಳತ್ತ 'ಪಾದಯಾತ್ರೆ' ಮಾಡಿದರೆ ನಮಗೆ ಕಾಣಿಸುವುದು ಬಹುಪಾಲು ಜಲಪಾತಗಳೇ.

ಅವುಗಳಲ್ಲಿ ಅತ್ಯಂತ ಆಕರ್ಷಣೀಯ ಹಾಗೂ ಬಹಳಷ್ಟು ಜನ ಪ್ರವಾಸಿಗರು ಮೆಚ್ಚುವುದು ಯಲ್ಲಾಪುರ ತಾಲೂಕಿನ ದೇಹಳ್ಳಿ ಪಂಚಾಯತ ವ್ಯಾಪ್ತಿಯ ಸಾತೋಡಿ ಜಲಪಾತವನ್ನು. ಅಂದಾಜು 20 ಮೀಟರ್ ಅಗಲ, ಅಷ್ಟೆ ಎತ್ತರದಿಂದ ವರ್ಷದ 12 ತಿಂಗಳು ದುಮ್ಮಿಕ್ಕುವ ಸಾತೋಡಿ ಜಲಪಾತ ಮಳೆಗಾಲ ಹಾಗೂ ಕಡು ಬೇಸಿಗೆಯಲ್ಲಿಯೂ ತನ್ನ ಆಕರ್ಷಣೆ ಸೌಂದರ್ಯ ಹಾಗೆಯೇ ಉಳಿಸಿಕೊಂಡಿದೆ. ಈ ಜಲಧಾರೆಯ ಉಗಮ ಕಾಳಿನದಿಯ ಉಪನದಿಯಾದ 'ಸೂರಬ್ಬಿ ಹಳ್ಳ"ಎನ್ನಲಾಗುತ್ತದೆ. ಸುಮಾರು 50 ಅಡಿ ಎತ್ತರದಿಂದ ವಿಶಾಲವಾಗಿ ಕೆಳಗೆ ಧುಮುಕುತ್ತಾ ಘೀಂಕರಿಸುತ್ತಾ ಹರಿಯುವ ನದಿ ಪ್ರವಾಸಿಗರನ್ನು ಮರುಳುಮಾಡುತ್ತದೆ.

ನಿತ್ಯ ಹರಿದ್ವರ್ಣದ ಕಾಡುಗಳು, ಮುಗಿಲೆತ್ತರದ ಬೆಟ್ಟಗಳಲ್ಲಿ ಹುಟ್ಟಿ ಪ್ರಪಾತಕ್ಕೆ ಧುಮುಕುವ ನದಿಗಳ ಜಲಧಾರೆ ನಿಧಾನವಾಗಿ ಪ್ರವಹಿಸುತ್ತಾ ಕಣಿವೆಗಳಲ್ಲಿ ನದಿಯಾಗಿ ಹರಿಯುತ್ತದೆ. ಸಾತೊಡ್ಡಿಯ ಜಲಪಾತ'ವನ್ನು ಕಂಡ ಪ್ರವಾಸಿಗರು ಅದನ್ನು ಅಮೆರಿಕದ ಚಿಕ್ಕ ನಯಾಗರ ಜಲಪಾತಕ್ಕೆ ಹೋಲಿಸುತ್ತಾರೆ. ತಂಪಾದ ವಾತಾವರಣ ಹಚ್ಚ ಹಸುರಿನ ವನಸಿರಿ, ಬಣ್ಣಬಣ್ಣದ ವಿವಿಧ ಪ್ರಕಾರದ ಹಕ್ಕಿಗಳ ಚಿಲಿಪಿಲಿ ಕಲರವ, ಬಂಡೆಗಳ ಮೇಲೆ ಮಧ್ಯೆ ಚಿಮ್ಮಿಕೊಂಡು ಕೆಳಗೆ ಹರಿದೋಡುವ ಜಲರಾಶಿ ಕಣ್ಣಿಗೆ ಮುದಕೊಡುತ್ತದೆ. ವರುಷವಿಡೀ ತನ್ನ ವೈಯಾರದಿಂದ ಶೋಭಿಸುವ ಸಾತೊಡ್ಡಿ ಜಲಪಾತ ಮಳೆಗಾಲದ ವೇಳೆ ತನ್ನ ಸೌಂದರ್ಯ ಮತ್ತು ಮೋಹಕತೆಯನ್ನು ಅರೆದು ಹೊಯ್ದಿರುವಂತೆ ಭಾಸವಾಗುತ್ತದೆ. ನಿಸರ್ಗದ ಮಧ್ಯೆ ಹಾಲುನೊರೆಯೋಪಾದಿಯಲ್ಲಿ ದುಮ್ಮಿಕ್ಕುವ ಜಲಪಾತದ ವೈಭವವನ್ನು ಕಾಣಲು ಪ್ರತಿದಿನ ಪ್ರವಾಸಿಗರ ದಂಡೇ ಸೇರಿರುತ್ತದೆ.

ಪರ್ವತಗಳು ಹಚ್ಚಹಸುರಿನಿಂದ ಆವೃತವಾಗಿರುವ ದೃಶ್ಯ ಕಣ್ಣಿಗೆ ಮುದನೀಡುತ್ತದೆ. ಅಂಕುಡೊಂಕಾದ ರಸ್ತೆಯಲ್ಲಿ ಹೋಗುವುದು ಮನಸ್ಸಿಗೆ ಮುದಕೊಟ್ಟರೆ, ಅಲ್ಲಿನ ವನಸಂಪತ್ತನ್ನು ಫೋಟೋ ಕಣ್ಣುಗಳಿಂದ ಸೆರೆಹಿಡಿಯುವ ಪರಿ ಅನನ್ಯ.



ದಶಕಗಳ ಕಾಲ ಸೂಕ್ತ ರಸ್ತೆ ವ್ಯವಸ್ಥೆ ಇಲ್ಲದೆ ಸೊರಗಿದ್ದ ಸಾತೋಡ್ಡಿ ಜಲಪಾತಕ್ಕೆ ಪ್ರವಾಸಿಗರನ್ನು ಸೆಳೆಯುವ ಉದ್ದೇಶದಿಂದ ಶಾಸಕರಾದ ಶ್ರೀ ಶಿವರಾಮ ಹೆಬ್ಬಾರ್ ಅವರು ಸರಕಾರದಿಂದ ಹೆಚ್ಚಿನ ಅನುದಾನವನ್ನು ಮಂಜೂರಿ ಮಾಡಿಸುವ ಮೂಲಕವಾಗಿ ಯಲ್ಲಾಪುರ ಪಟ್ಟಣದಿಂದ ಜಲಪಾತಕ್ಕೆ ತೆರಳುವ ರಸ್ತೆಯನ್ನು ಹಂತವಾಗಿ ಕಾಂಕ್ರೇಟಿಕರಣಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದು ಮುಂದಿನ ಕೆಲವು ತಿಂಗಳಿನಲ್ಲಿ ಸಂಪೂರ್ಣ ರಸ್ತೆ ನಿರ್ಮಾಣವಾಗಲಿದೆ. ಸಚಿವರಾದ ಶ್ರೀ ಶಿವರಾಮ ಹೆಬ್ಬಾರ್ ಅವರು ಕ್ಷೇತ್ರದ ಹಾಗೂ ಉತ್ತರ ಕನ್ನಡ ಜಿಲ್ಲೆಯ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸುವ ಹಾಗೂ ಪ್ರವಾಸಿ ತಾಣಗಳನ್ನು ಹೊರ ಜಗತ್ತಿಗೆ ಪರಿಚಯಿಸುವ ನಿಟ್ಟಿನಲ್ಲಿ ಹಲವಾರು ಮಹತ್ವಾಕಾಂಕ್ಷೆಯ ಯೋಜನೆಗಳನ್ನು ರೂಪಿಸಲು ಕಾರ್ಯಪ್ರವರ್ತರಾಗಿದ್ದಾರೆ,

ಜಲಪಾತದ ಹತ್ತಿರ 4–5 ಕಿ.ಮೀ. ದೂರ ಕಾಳಿನದಿಯ ಹಿನ್ನೀರಿನ ದಂಡೆಯ ಮೇಲೆ ಸಾಗಬೇಕು. ಕೊರೆಯುವ ಚಳಿಯಲ್ಲಿ ಹರಿವ ನೀರಿನಲ್ಲಿ ಜಳಕ ಮಾಡುವ ಅನುಭವ ಅದ್ಭುತ. ಭಾರಿ ಪ್ರಮಾಣದ ಹಾಸುಕಲ್ಲುಗಳ ಮೇಲೆ ಚಿತ್ತಾರ ಮಾಡಿದ್ದಾರೆನ್ನುವಂತಹ ಅನುಭವವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಶುಭ್ರ ಮತ್ತು ಪರಿಸರ ಮಲಿನತೆಯಿಲ್ಲದ ಸೊಗಸಾದ ವಾತಾವರಣ ಒಂದು ಹೊಸ ಅನುಭವವನ್ನು ನೀಡುತ್ತದೆ. ನೀವು ಒಮ್ಮೆ ಭೇಟಿ ನೀಡಿ ಪ್ರಕೃತಿ ಸಂದರ್ಯವನ್ನು ಕಣ್ಣು ತುಂಬಿಸಿಕೊಳ್ಳಿ.